# ಸುದ್ದಿ ಸಂಚಯ

◆ ರಾಮಕೃಷ್ಣ ಮಿಷನ್ನಿನ ಪುಣೆ, ಕೊಲ್ಕತ್ತಾ, ದೆಹಲಿ ಹಾಗೂ ಬೆಂಗಳೂರು ಕೇಂದ್ರಗಳ ಮೂಲಕ ಐ.ಟಿ.ಸಿ ಕಂಪನಿಯು ಸುನಾಮಿಯ ಸಂತ್ರಸ್ತರಿಗೆ ಒಂದು ಲಕ್ಷ ಹತ್ತು ಸಾವಿರ ಹೊಸ ಅಂಗಿಗಳನ್ನು ವಿತರಿಸುತ್ತಿವೆ. ಮೂರು ಕೋಟಿ ಬೆಲೆಬಾಳುವ ಈ ಉಡುಪುಗಳನ್ನು ಈಗಾಗಲೇ ಚೆನ್ನೈ ಕೇಂದ್ರದಿಂದ ನೀಡಲಾಗುತ್ತಿದೆ. ಬೆಂಗಳೂರಿನಿಂದ ೬,೦೦೦ ಉಡುಪುಗಳನ್ನು ಕಳಿಸಲಾಗಿದೆ. ಇದಲ್ಲದೆ ಬೆಂಗಳೂರಿನ ಸಹೃದಯ ಭಕ್ತರು ಸಂತ್ರಸ್ತರ ನಿಧಿಗಾಗಿ ೩೦ ಲಕ್ಷ ರೂಪಾಯಿಗಳನ್ನು ನೀಡಿದ್ದಾರೆ.

◆ ರಾಮಕೃಷ್ಣ ಮಿಷನ್ ಸಾರದಾಪೀಠದ ವಿದ್ಯಾಮಂದಿರ ಕಾಲೇಜಿಗೆ *ಗ್ರೇಡ್*—ಎ + (ಅಂಕಗಳು ೯೦ % - ೯೫ %) ಸ್ಥಾನವನ್ನು ಭಾರತದ ರಾಷ್ಟ್ರೀಯ ಅಸೆಸ್‌ಮೆಂಟ್ ಮತ್ತು ಅಕ್ರಿಡಿಟೇಷನ್ ಕೌನ್ಸಿಲ್ (ಯೂನಿವರ್ಸಿಟಿ ಗ್ರಾಂಟ್ಸ್ ಕಮಿಷನ್‌ನಡಿಯಲ್ಲಿನ ಸ್ವಾಯತ್ತತಾ ಸಂಸ್ಥೆ) ನೀಡಿದೆ. ವಿದ್ಯಾಮಂದಿರವು ಕೊಲ್ಕತಾ ವಿಶ್ವವಿದ್ಯಾನಿಲಯದಲ್ಲಿ ಈ ರೀತಿಯ ಎ + ಗ್ರೇಡನ್ನು ಪಡೆದಿರುವ ಮೊಟ್ಟ ಮೊದಲ ಹಾಗೂ ಏಕೈಕ ಸಂಸ್ಥೆಯಾಗಿದೆ. ಪಶ್ಚಿಮ ಬಂಗಾಳ ರಾಜ್ಯದಲ್ಲಿ ಇಂತಹ ಗ್ರೇಡನ್ನು ಪಡೆದಿರುವ ದ್ವಿತೀಯ ಸಂಸ್ಥೆಯಾಗಿದೆ.

◆ ಫೆಬ್ರವರಿ ೩ರಿಂದ ೬ರ ವರೆಗೆ ಕೊಯಮತ್ತೂರಿನ ರಾಮಕೃಷ್ಣ ಮಿಷನ್ ವಿದ್ಯಾಲಯವು ತನ್ನ ಅಮೃತ ಮಹೋತ್ಸವವನ್ನು ಆಚರಿಸಿತು. ೧೪ ಶಿಕ್ಷಣ ಸಂಸ್ಥೆಗಳನ್ನೊಳಗೊಂಡ ಈ ವಿಶಾಲ ವಿದ್ಯಾಲಯವು ಪ್ರೌಢಶಾಲೆ, ಕಲಾನಿಲಯ, ಗಾಂಧೀ ಶಿಕ್ಷಕರ ಪ್ರಶಿಕ್ಷಣ ಕೇಂದ್ರ, ಸ್ವಾಯತ್ತ ಶಿಕ್ಷಣ ಮಹಾವಿದ್ಯಾಲಯ, ಕೈಗಾರಿಕಾ ತರಬೇತಿ ಕೇಂದ್ರ, ಪಾಲಿಟೆಕ್ನಿಕ್, ಕೃಷಿ ಹಾಗೂ ಗ್ರಾಮಾಂತರ ಅಭಿವೃದ್ಧಿ ಕೇಂದ್ರ, ಮಾರುತಿ ದೈಹಿಕ ಶಿಕ್ಷಣ ಕಾಲೇಜು, ಸ್ವಾಮಿ ಶಿವಾನಂದ ಹೈಯರ್ ಸೆಕೆಂಡರಿ ಶಾಲೆ, ಕಲೆ ಮತ್ತು ವಿಜ್ಞಾನದ (ಹಗಲು ಮತ್ತು ಸಂಜೆ ಸ್ವಾಯತ್ತತೆಯ ಕಾಲೇಜು) ಬಾಲವಾಡಿ, ಸಮುದಾಯ ಪಾಲಿಟೆಕ್ನಿಕ್ ಯೋಜನೆ, ಸ್ವಾಮಿ ಶಿವಾನಂದ ಕ್ರೀಡಾ ಶಾಲೆ, ಅಂಗವಿಕಲರಿಗಾಗಿ ಅಂತಾರಾಷ್ಟ್ರೀಯ ಮಾನವ ಸಂಪನ್ಮೂಲ ಬೆಳವಣಿಗೆ ಕೇಂದ್ರ, ಹಾಗೂ ಸರ್ವಾಂಗೀಣ ಗ್ರಾಮೀಣಾಭಿವೃದ್ಧಿ ಕೇಂದ್ರಗಳ ಮೂಲಕ ಸೇವಾ ಕಾರ್ಯಗಳನ್ನು ಯಶಸ್ವಿಯಾಗಿ ಈ ಸಂಸ್ಥೆಯು ನಡೆಸಿಕೊಂಡು ಬಂದಿದೆ. ಈ ಸಂಸ್ಥೆಯ ಮಹೋತ್ಸವದಲ್ಲಿ ನಾಡಿನ ಹಿರಿಯರು ಹಾಗೂ ಸಂಘದ ಹಿರಿಯ ಸಂನ್ಯಾಸಿಗಳು ಭಾಗವಹಿಸಿದ್ದರು.

◆ ಚೆನ್ನೈನಲ್ಲಿರುವ ರಾಮಕೃಷ್ಣ ಮಿಷನ್ ಸ್ಟೂಡೆಂಟ್ಸ್ ಹೋಮ್ (ವಿದ್ಯಾರ್ಥಿ ನಿಲಯ) ಫೆಬ್ರವರಿ ೧೧ರಿಂದ ೧೩ರವರೆಗೆ ತನ್ನ ಶತಮಾನೋತ್ಸವವನ್ನು ಆಚರಿಸಿತು. ದೀಪ ಬೆಳಗುವುದರ ಮೂಲಕ ಸಂಘದ ಕಾರ್ಯದರ್ಶಿಗಳಾದ ಶ್ರೀಮತ್ ಸ್ವಾಮಿ ಸ್ಮರಣಾನಂದಜಿ ಮಹಾರಾಜ್ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಪ್ರವಚನಗಳು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಸಾವಿರಾರು ಜನರನ್ನು ಆಕರ್ಷಿಸಿದವು. ದೇಶದ ವಿವಿಧ ಕಡೆಗಳಿಂದ ಬಂದ ೧೬೬ ಸಂನ್ಯಾಸಿಗಳು ಕಾರ್ಯಕ್ರಮಗಳಲ್ಲಿ ಭಾಗವಹಿಸಿದರು. ಹಿರಿಯ ಹಳೆಯ ವಿದ್ಯಾರ್ಥಿಗಳು, ಎಲ್ಲ ಅಧ್ಯಾಪಕ ವೃಂದ ಹಾಗೂ ಇತರೆ ಸಿಬ್ಬಂದಿ ವರ್ಗದ ಸೇವೆಯನ್ನು ಗುರುತಿಸಿ ಅವರನ್ನು ಸನ್ಮಾನಿಸಲಾಯಿತು.

◆ ಬೆಂಗಳೂರಿನ ರಾಮಕೃಷ್ಣ ಮಠದ ವಿದ್ಯಾರ್ಥಿ ಮಂದಿರವು ಫೆಬ್ರವರಿ ೧೨ರಿಂದ ೧೪ರವರೆಗೆ ತನ್ನ ರಜತ ಮಹೋತ್ಸವವನ್ನು ಆಚರಿಸಿತು. ಪ್ರವಚನಗಳು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು. ಹಳೆಯ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

◆ ಫೆಬ್ರವರಿ ೧೯ರಂದು ಕೊಲ್ಕತಾದ ರಾಮಕೃಷ್ಣ ಮಿಷನ್ ಸಾರದಾ ಪೀಠದ ಗಣಕಯಂತ್ರ ಕೇಂದ್ರವು ಬಿ.ಪಿ.ಒ (Business Process Outsourcing) ಕಂಪನಿಗಳಿಗಾಗಿ ಮಾನವ ಸಂಪನ್ಮೂಲ ಬೆಳವಣಿಗೆ ಎಂಬ ವಿಶೇಷ ಸಮ್ಮೇಳವನ್ನು ಆಯೋಜಿಸಿತ್ತು. ಪರಿಣತರಿಂದ ವಿಚಾರ ಪೂರ್ಣವಾದ ಅಧಿವೇಶನಗಳಿದ್ದವು.

◆ ಫೆಬ್ರವರಿ ೨೦ರಂದು ಧಾರವಾಡದ ಖಾಸಗೀ ಸಂಸ್ಥೆಯಾದ ರಾಮಕೃಷ್ಣ ವಿವೇಕಾನಂದ ಆಶ್ರಮವು ನೂತನವಾಗಿ ನಿರ್ಮಿಸಿರುವ ರಾಮಕೃಷ್ಣ ಪರಮಹಂಸರ ದೇವಸ್ಥಾನವನ್ನು ಪರಮಪೂಜ್ಯ ಶ್ರೀಮತ್ ಸ್ವಾಮಿ ಗೌತಮಾನಂದಜಿ ಮಹಾರಾಜರು ಉದ್ಘಾಟಿಸಿದರು. ಅಮೃತ ಶಿಲೆಯಲ್ಲಿ ಕಡೆದಿರುವ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಸಂಘದ ಹಿರಿಯ ಸಂನ್ಯಾಸಿಗಳು, ರಾಮಕೃಷ್ಣ ವಿವೇಕಾನಂದರ ಭಾವ ಪ್ರಚಾರವನ್ನು ಮಾಡುತ್ತಿರುವ ಇತರ ಸಂಸ್ಥೆಗಳ ಯತಿಗಳು, ವಿದ್ವಾಂಸರು ಹಾಗೂ ಭಕ್ತರು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು. ೫ನೇ ಅಖಿಲ ಕರ್ನಾಟಕ ರಾಮಕೃಷ್ಣ ವಿವೇಕಾನಂದ ಭಕ್ತ ಸಮ್ಮೇಳನವನ್ನೂ ೧೮ರಿಂದ ೨೦ರವರೆಗೆ ಆಯೋಜಿಸಲಾಗಿತ್ತು. ಶ್ರೀರಾಮಕೃಷ್ಣ ಚಿಂತನಸೌರಭ, ಶ್ರೀಶಾರದಾ ಚಿಂತನಸೌರಭ ಮತ್ತು ಸ್ವಾಮಿ ವಿವೇಕಾನಂದ ಚಿಂತನ ಸೌರಭ ಎಂಬ ಹೆಸರಿನಲ್ಲಿ ಮೂರು ದಿನಗಳ ಕಾಲ ದಿವ್ಯತ್ರಯರ ಜೀವನವನ್ನು ಕುರಿತು ಉಪನ್ಯಾಸಗಳು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

◆ ಬಾಂಗ್ಲಾದೇಶದ ರಾಜಧಾನಿ ಢಾಕಾದಲ್ಲಿರುವ ರಾಮಕೃಷ್ಣ ಮಠ ಮತ್ತು ಮಿಷನ್ನಿನ ಶಾಖೆಯ ನೂತನ ಮಂದಿರದ ಉದ್ಘಾಟನಾ ಸಮಾರಂಭವು ೨೦೦೫ನೇ ಫೆಬ್ರವರಿ ೨೪ರಂದು ನೆರವೇರಿತು. ೧೯೦೯ರಲ್ಲಿ ಕಟ್ಟಲಾಗಿದ್ದ ಸಣ್ಣ ದೇವಾಲಯವು ಶಿಥಿಲವಾಗಿದ್ದರಿಂದ ವಿಶಾಲವಾದ ಶ್ರೀರಾಮಕೃಷ್ಣ ದೇವಾಲಯದ ನಿರ್ಮಾಣ ಅಲ್ಲಿನ ರಾಮಕೃಷ್ಣ ಮಹಾಸಂಘದ ಶಾಖೆಗೆ ನೂತನ ಶೋಭೆಯನ್ನು ತಂದಿದೆ. ಸಂಘದ ಉಪಾಧ್ಯಕ್ಷರಾದ ಪರಮಪೂಜ್ಯ ಶ್ರೀಮತ್ ಸ್ವಾಮಿ ಗಹನಾನಂದಜಿ ಮಹಾರಾಜ್ ಹಾಗೂ ಶ್ರೀಮತ್ ಸ್ವಾಮಿ ಆತ್ಮಸ್ಥಾನಂದಜಿ ಮಹಾರಾಜ್‌ರ ಸಾನ್ನಿಧ್ಯದಲ್ಲಿ ಶ್ರೀರಾಮಕೃಷ್ಣ ಪರಮಹಂಸರ ಅಮೃತಶಿಲೆಯ ಮೂರ್ತಿಯ ಪ್ರತಿಷ್ಠಾಪನೆಯಾಯಿತು. ವಿಧ್ಯುಕ್ತವಾದ ಪೂಜೆ, ಹೋಮಗಳಿಂದ ಸಾಲಂಕೃತ ಮಂದಿರವನ್ನು ಶುದ್ಧಗೊಳಿಸಿ ದಿವ್ಯತ್ರಯರಿಗೆ ಅರ್ಪಿಸಲಾಯಿತು. ಸಪ್ತಾಹದುದ್ದಕ್ಕೂ ಹಮ್ಮಿಕೊಂಡಿದ್ದ ವಿಶೇಷ ಉಪನ್ಯಾಸಗಳು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಜನರನ್ನು ಆಕರ್ಷಿಸಿದವು. ಜಾತಿ ಮತಗಳ ಭೇದವಿಲ್ಲದೆ ಸಹಸ್ರಾರು ಜನರು ಭಕ್ತಿಯಿಂದ ಇವುಗಳಲ್ಲಿ ಪಾಲ್ಗೊಂಡರು. ಆ ದೇಶದ ಮುಸ್ಲಿಂ ಬಾಂಧವರು ಬಹಳ ಸಂಖ್ಯೆಯಲ್ಲಿ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ವಿಶೇಷ ಗಮನ ಸೆಳೆದರು. ಶ್ರೀರಾಮಕೃಷ್ಣರನ್ನು ಕುರಿತು ಅತ್ಯಂತ ಸ್ಫೂರ್ತಿದಾಯಕವಾಗಿ ಆ ದೇಶದ ಮುಸ್ಲಿಂ ವಿದ್ವಾಂಸರು ಮಾತನಾಡಿದರು. ಈ ಸಂದರ್ಭದಲ್ಲಿ ಯುವ ಸಮ್ಮೇಳನವನ್ನೂ ಆಯೋಜಿಸಲಾಗಿತ್ತು. ಧರ್ಮಗಳ ಸಮ್ಮೇಳನದಲ್ಲಿ ವಿವಿಧ ಧರ್ಮಾವಲಂಬಿಗಳಿಂದ ಧರ್ಮ ಸೌಹಾರ್ದತೆಯ ಕುರಿತು ವಿಚಾರವಿನಿಮಯವಿತ್ತು. ಬಾಂಗ್ಲಾದೇಶದ ಹಿರಿಯ ಅಧಿಕಾರಿಗಳೂ ಸಹ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಪ್ರೋತ್ಸಾಹ ನೀಡಿದರು.